**ದಿನಾಂಕ :17-05-2014ರಂದು ಬೆಳಿಗ್ಗೆ 11-00 ಗಂಟೆಗೆ ಜಿಲ್ಲಾ ಪಂಚಾಯತ್ ಅಧ್ಯಕ್ಷರಾದ ಮಾನ್ಯ ಶ್ರೀಮತಿ ಸಾಕಮ್ಮ ನಾಗರಾಜು ರವರ ಅಧ್ಯಕ್ಷತೆಯಲ್ಲಿ ನಡೆದ ಜಿಲ್ಲಾ ಪಂಚಾಯತ್ ಹಣಕಾಸು ಲೆಕ್ಕ ಪರಿಶೋಧನಾ ಮತ್ತು ಯೋಜನಾ ಸ್ಥಾಯಿ ಸಮಿತಿ ಸಭೆಯ ನಡವಳಿ.**

ಹಾಜರಿದ್ದ ಸದಸ್ಯರು: ಶ್ರೀಯುತರುಗಳು:

1) ಶ್ರೀಮತಿ ಸಾಕಮ್ಮ ನಾಗರಾಜು - ಅಧ್ಯಕ್ಷರು
2) ಶ್ರೀಮತಿ ರಾಧ ದೇವರಾಜು - ಸದಸ್ಯರು
3) ಶ್ರೀಮತಿ ದಾಕ್ಷಾಯಿಣಿ - ಸದಸ್ಯರು
4) ಶ್ರೀ ರಾಮಚಂದ್ರಯ್ಯ - ಸದಸ್ಯರು
5) ಶ್ರೀ ಟಿ.ಹೆಚ್.ಕೃಷ್ಣಪ್ಪ - ಸದಸ್ಯರು
6) ಮುಖ್ಯ ಲೆಕ್ಕಾಧಿಕಾರಿಗಳು - ಸದಸ್ಯ ಕಾರ್ಯದರ್ಶಿಗಳು
7) ಉಪ ಕಾರ್ಯದರ್ಶಿ ( ಆಡಳಿತ ), ಜಿ.ಪಂ. ತುಮಕೂರು
8) ಮುಖ್ಯ ಯೋಜನಾಧಿಕಾರಿಗಳು, ಜಿ.ಪಂ. ತುಮಕೂರು

ಜಿಲ್ಲಾ ಪಂಚಾಯತ್ ವ್ಯಾಪ್ತಿಯ ಜಿಲ್ಲಾ ಮಟ್ಟದ ಅಧಿಕಾರಿಗಳು

(ಹಾಜರಾತಿ ವಹಿಯಲ್ಲಿದ್ದಂತೆ )

****

ಪ್ರಾರಂಭದಲ್ಲಿ ಮುಖ್ಯ ಲೆಕ್ಕಾಧಿಕಾರಿಗಳು ಹಾಗೂ ಸದಸ್ಯ ಕಾರ್ಯದರ್ಶಿಗಳು, ಹಣಕಾಸು, ಲೆಕ್ಕ ಪರಿಶೋಧನಾ ಮತ್ತು ಯೋಜನಾ ಸ್ಥಾಯಿ ಸಮಿತಿ ರವರು ಈ ದಿನ ಜಿಲ್ಲಾ ಪಂಚಾಯತಿಯ 2014-15ನೇ ಸಾಲಿನ ಹಣಕಾಸು ಲೆಕ್ಕ ಪರಿಶೋಧನಾ ಮತ್ತು ಯೋಜನಾ ಸ್ಥಾಯಿ ಸಮಿತಿಯ ಮೊದಲನೇ ಸಭೆಯನ್ನು ಕರೆಯಲಾಗಿದೆ. ಈ ಸಭೆಗೆ ಮಾನ್ಯ ಅಧ್ಯಕ್ಷರು ಹಾಗೂ ಜಿಲ್ಲಾ ಪಂಚಾಯತಿಯ ಹಣಕಾಸು ಲೆಕ್ಕ ಪರಿಶೋಧನೆ ಮತ್ತು ಯೋಜನಾ ಸ್ಥಾಯಿ ಸಮಿತಿ ಅಧ್ಯಕ್ಷರೂ ಆದ ಮಾನ್ಯ ಶ್ರೀಮತಿ ಸಾಕಮ್ಮ ನಾಗರಾಜುರವರನ್ನು ಹೃತ್ಪೂರ್ವಕವಾಗಿ ಸ್ವಾಗತಿಸಿ ಸಭೆಯ ಅಧ್ಯಕ್ಷತೆ ವಹಿಸಿಕೊಂಡು ಸಭೆಯ ಕಾರ್ಯಕಲಾಪಗಳನ್ನು ನಡೆಸಿಕೊಡುವಂತೆ ಕೋರಿದರು. ಸಭೆಯಲ್ಲಿ ಹಾಜರಿದ್ದ ಗೌರವಾನ್ವಿತ ಜಿಲ್ಲಾ ಪಂಚಾಯತ್ ಸದಸ್ಯರು ಹಾಗೂ ಹಣಕಾಸು ಲೆಕ್ಕ ಪರಿಶೋಧನಾ ಮತ್ತು ಯೋಜನಾ ಸ್ಥಾಯಿ ಸಮಿತಿ ಸದಸ್ಯರುಗಳನ್ನು ಮತ್ತು ಜಿಲ್ಲಾ/ತಾಲ್ಲೂಕು ಮಟ್ಟದ ಅಧಿಕಾರಿಗಳು, ಜಿಲ್ಲಾ ಪಂಚಾಯತ್ ಶಾಖಾ ಮುಖ್ಯಸ್ಥರನ್ನು ಸ್ವಾಗತಿಸಿದರು.

ಅದರಂತೆ ಸಭೆಯ ಮಾನ್ಯ ಅಧ್ಯಕ್ಷರ ಸೂಚನೆ ಮೇರೆಗೆ ಇತ್ತೀಚೆಗೆ ನಿಧನರಾದ ಜಿ.ಪಂ.ನ ಮಾನ್ಯ ಸದಸ್ಯರಾದ ಶ್ರೀ ಬಿ.ಕೆ. ಬಡೀರಣ್ಣನವರು ದೈವಾಧೀನರಾಗಿರುವ ಹಿನ್ನಲೆಯಲ್ಲಿ ಅವರ ಗೌರವಾರ್ಥ ಸಭೆಯಲ್ಲಿ 2 ನಿಮಿಷ ಮೌನವನ್ನು ಆಚರಿಸುವ ಮೂಲಕ ಸಂತಪ ಸೂಚಿಸಲಾಯಿತು.

ನಂತರ ಮಾನ್ಯ ಅಧ್ಯಕ್ಷರು ಮಾತನಾಡಿ, ಈ ಸಭೆಗೆ ಆಗಮಿಸಿರುವ ಸಮಿತಿಯ ಎಲ್ಲಾ ಗೌರವಾನ್ವಿತ ಮಾನ್ಯ ಜಿಲ್ಲಾ ಪಂಚಾಯತ್ ಸದಸ್ಯರು ಹಾಗೂ ಸಭೆಯಲ್ಲಿ ಉಪಸ್ಥಿತರಿದ್ದ ಜಿಲ್ಲಾ ಪಂಚಾಯತಿಯ ಅಧಿಕಾರಿಗಳು ಮತ್ತು ಜಿಲ್ಲಾ/ತಾಲ್ಲೂಕು ಮಟ್ಟದ ಅಧಿಕಾರಿಗಳನ್ನು ಸಭೆಗೆ ಸ್ವಾಗತಿಸಿ ಸಭೆಯ ಕಾರ್ಯಕಲಾಪ ಪ್ರಾರಂಭಿಸಿದರು.

<u>ವಿಷಯ ಸೂಚಿ:-</u>

**I. 2013-14ನೇ ಸಾಲಿನ ಜನವರಿ , ಫೆಬ್ರುವರಿ ಮತ್ತು ಮಾರ್ಚ್ 2014ನೇ ಮಾಹೆಯ ಕ್ರೋಢಿಕೃತ ಸ್ವೀಕೃತಿ ಮತ್ತು ವೆಚ್ಚದ ಲೆಕ್ಕಗಳಿಗೆ ಅನುಮೋದನೆ ನೀಡುವ ಬಗ್ಗೆ.**

ಸದಸ್ಯ ಕಾರ್ಯದರ್ಶಿಗಳು ಮಾತನಾಡಿ, 2013-14ನೇ ಸಾಲಿನ ಜನವರಿ, ಫೆಬ್ರುವರಿ ಮತ್ತು ಮಾರ್ಚ್ 2014ರ ಮಾಹೆಯ ಸ್ವೀಕೃತಿ ಮತ್ತು ಲೆಕ್ಕದ ವೆಚ್ಚಗಳನ್ನು ಖಜಾನೆಯಿಂದ ಪಡೆದು ಸಂಕಲನ ಮಾಡಿ ಮಾಸಿಕ ಲೆಕ್ಕ ಸಿದ್ಧಪಡಿಸಲಾಗಿದೆ; ಕ್ರೋಢೀಕೃತ ಸ್ವೀಕೃತಿ ಮತ್ತು ವೆಚ್ಚದ ಮಾಸಿಕ ಲೆಕ್ಕಗಳಿಗೆ ಅನುಮೋದನೆ ನೀಡುವ ಬಗ್ಗೆ ಈ ಸ್ಥಾಯಿ ಸಮಿತಿ ಸಭೆಯಲ್ಲಿ ಮಂಡಿಸಲಾಗಿದ್ದು, ಸದರಿ ಕ್ರೋಢೀಕೃತ ಸ್ವೀಕೃತಿ ಮತ್ತು ವೆಚ್ಚದ ಲೆಕ್ಕಗಳನ್ನು ಸರ್ಕಾರಕ್ಕೆ ಸಲ್ಲಿಸಿದ್ದು ಸಭೆಯು ಅನುಮೋದನೆ ನೀಡಬೇಕೆಂದು ಕೋರಿದರು.

**ಸಮಿತಿಯು 2013-14ನೇ ಸಾಲಿನ ಜನವರಿ, ಫೆಬ್ರುವರಿ ಮತ್ತು ಮಾರ್ಚ್ 2014ರ ಮಾಹೆಯ ಕ್ರೋಢೀಕೃತ ಸ್ವೀಕೃತಿ ಮತ್ತು ವೆಚ್ಚದ ಮಾಸಿಕ ಲೆಕ್ಕಗಳನ್ನು ಪರಿಶೀಲಿಸಿ ಅನುಮೋದನೆ ನೀಡಿ ಕ್ರೋಢೀಕೃತ ಮಾಹಿತಿಯನ್ನು ಸರ್ಕಾರಕ್ಕೆ ಕಳುಹಿಸಿರುವುದನ್ನು ಸಭೆಯು ಸರ್ವಾನುಮತದಿಂದ ಅನುಮೋದಿಸಿತು.**

II) ಅಧ್ಯಕ್ಷರ ಅಪ್ಪಣೆ ಮೇರೆಗೆ ಬರುವ ಇತರೆ ವಿಷಯಗಳು.

1.ಜಿಲ್ಲಾ ವಯಸ್ಕರ ಶಿಕ್ಷಣಾಧಿಕಾರಿಗಳು, ಜಿ.ಪಂ. ತುಮಕೂರು ರವರು ಟಿಪ್ಪಣಿ ನೀಡಿರುವ ಬಗ್ಗೆ.

ಸದಸ್ಯ ಕಾರ್ಯದರ್ಶಿಗಳು ಮಾತನಾಡಿ, ಜಿಲ್ಲಾ ವಯಸ್ಕರ ಶಿಕ್ಷಣಾಧಿಕಾರಿಗಳು, ಜಿ.ಪಂ. ತುಮಕೂರು ರವರು ಕಛೇರಿಯ ಉಪಯೋಗಕ್ಕಾಗಿ Office chamber table 5X4” -1, Plastic chair-25, Officers chair-1 & All in One Printer-1 ಗಳನ್ನು ಹೊಸದಾಗಿ ಖರೀದಿಸಲು ಸಮಿತಿಗೆ ಮಂಡಿಸಲಾಗಿದ್ದು, Office chamber table 5X4” -1, Plastic

chair-25, Officers chair-1 & All in One Printer-1ಗಳನ್ನು (ಒಟ್ಟು ರೂ.72,000/-) ಖರೀದಿಸಲು ಸಮಿತಿಯ ಅನುಮೋದನೆ ಕೋರಿರುತ್ತಾರೆ.

2. ಪ್ರಾಚಾರ್ಯರು, ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆ, ಅಮ್ಮಸಂದ್ರ, ತುರುವೇಕೆರೆ ತಾಲ್ಲೂಕು ರವರು ಸಂಸ್ಥೆಯ ತರಬೇತಿ ಕಾರ್ಯಕ್ಕೆ ಅತಿ ಮುಖ್ಯವಾಗಿರುವ ಕಚ್ಚಾ ಸಾಮಗ್ರಿಗಳನ್ನು ಮತ್ತು ಯಂತ್ರೋಪಕರಣಗಳನ್ನು (ಒಟ್ಟು ರೂ.6,53,095/-) ಖರೀದಿಸಲು ಸಮಿತಿಯ ಅನುಮತಿ ಕೋರಿರುವ ಬಗ್ಗೆ.

ಮುಂದುವರೆದು ಸದಸ್ಯ ಕಾರ್ಯದರ್ಶಿಗಳು ಮಾತನಾಡಿ, ಮೇಲಿನ ಎರಡು ಪ್ರಸ್ತಾವನೆಗಳನ್ನು ಪರಿಶೀಲಿಸಲಾಗಿ, ಆರ್ಥಿಕ ವರ್ಷದ ಪ್ರಾರಂಭದಲ್ಲಿಯೇ ಪ್ರಸ್ತಾವನೆ ಸಲ್ಲಿಸಿದ್ದು ಕಛೇರಿ/ಸಂಸ್ಥೆಗೆ ಅತ್ಯಾವಶ್ಯಕವಾದ ವೆಚ್ಚಗಳಿಗೆ ಅನುದಾನ ಕಾಯ್ದಿರಿಸಿಕೊಂಡು ಅನುದಾನದ ಲಭ್ಯತೆಯನ್ನು ಆಧರಿಸಿ ಖರೀದಿಗೆ ಕ್ರಮವಹಿಸಬಹುದಾಗಿರುತ್ತದೆ ಎಂದು ಸಮಿತಿಯ ಗಮನಕ್ಕೆ ತಂದರು.

ಸಮಿತಿಯು ಸದಸ್ಯ ಕಾರ್ಯದರ್ಶಿಯವರ ಅಭಿಪ್ರಾಯವನ್ನು ಆಲಿಸಿ ಅನುದಾನದ ಲಭ್ಯತೆಯನ್ನು ಆಧರಿಸಿ ಸದರಿ ಪರಿಕರಗಳನ್ನು ಖರೀದಿಸಲು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯವರ ಅನುಮತಿ ಪಡೆದು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕ ನಿಯಮ 2000ದ ರೀತ್ಯ ನಿಬಂಧನೆಗಳನ್ನು ಪಾಲಿಸಿ ಖರೀದಿಗೆ ಕ್ರಮವಹಿಸಲು ಸಮಿತಿಯು ತೀರ್ಮಾನಿಸಿತು.

( ಕ್ರಮ: ಜಿಲ್ಲಾ ವಯಸ್ಕರ ಶಿಕ್ಷಣಾಧಿಕಾರಿಗಳು, ತುಮಕೂರು/ ಪ್ರಾಚಾರ್ಯರು, ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆ, ಅಮ್ಮಸಂದ್ರ)

3. ಈ ಕೆಳಕಂಡ ಸಂಘ ಸಂಸ್ಥೆಯವರು /ಮನವಿದಾರರು ಧನಸಹಾಯ ಕೋರಿರುವ ಬಗ್ಗೆ.

ಸದಸ್ಯ ಕಾರ್ಯದರ್ಶಿಗಳು ಮಾತನಾಡಿ, ಈ ಸಭೆಯಲ್ಲಿ ಮಂಡಿಸಲಾಗಿರುವ ಧನ ಸಹಾಯದ ಪ್ರಸ್ತಾವನೆಗಳನ್ನು ಮಾನ್ಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ ಗಮನಕ್ಕೆ ತರಲಾಗುವುದು; ಮಾನ್ಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯವರು ಈ ಹಿಂದೆಯೇ ಸರ್ಕಾರದ ಸುತ್ತೋಲೆಯಂತೆ ಕ್ರಮವಹಿಸಲು ತಿಳಿಸಿ, ಅದರಂತೆ ಸರ್ಕಾರದ ಸುತ್ತೋಲೆ ಸಂಖ್ಯೆ:ಗ್ರಾಅಪ/172/ತಾಪಸ/2007/ದಿನಾಂಕ:08-01-2008ರಲ್ಲಿನ ಸಂಘ ಸಂಸ್ಥೆಗಳಿಗೆ ವಂತಿಗೆ/ಧನಸಹಾಯ ನೀಡುವ ಕುರಿತ ಪ್ರಮುಖ ಅಂಶಗಳನ್ನು ಸಭೆಗೆ ವಿವರಿಸುತ್ತಾ, ವಂತಿಗೆ/ಧನಸಹಾಯ ನೀಡಲು ಸರ್ಕಾರದಿಂದ ಪ್ರತ್ಯೇಕ ಅನುದಾನವನ್ನು ನೀಡುವುದಿಲ; ಅವುಗಳು ತಮ್ಮದೇ ಆದ ಸಂಪನ್ಮೂಲಗಳಿಂದ ಅವುಗಳ ನಿಧಿಯಿಂದಲೇ ವಂತಿಗೆಯನ್ನು ಭರಿಸಬೇಕಾಗುತ್ತದೆ. ವೈಯಕ್ತಿಕ ಫಲಾನುಬವಿಗಳನ್ನು ಆದಷ್ಟು ಕಡಿಮೆ ಮಾಡುವುದು, ಅನಿವಾರ್ಯವಾಗಿದ್ದ ಪ್ರಸಂಗಗಳಲ್ಲಿ

ಜಿಲ್ಲಾ, ತಾಲ್ಲೂಕು ಮತ್ತು ಗ್ರಾಮ ಪಂಚಾಯತಿಗಳಿಗೆ ಕ್ರಮವಾಗಿ ರೂ.20,000/- 10,000/- ಮತ್ತು ರೂ.5,000/-ಗಳಿಗೆ ಮೀರದಂತೆ ಸಹಾಯಧನ ಮಂಜೂರು ಮಾಡಬಹುದು. ಇಂತಹ ಸಂದರ್ಭದಲ್ಲೂ ಸಹ ವೈಯಕ್ತಿಕ ಫಲಾನುಭವಿಯ ಕಾರ್ಯಕ್ಷೇತ್ರ ಅಯಾಯ ಪಂಚಾಯತ್ ರಾಜ್ ಹಂತದ ವ್ಯವಸ್ಥೆಗೆ ಸಂಬಂಧಿಸಿದ್ದಲ್ಲಿ ಮಾತ್ರ ಸಹಾಯಧನ ಮಂಜೂರು ಮಾಡಬಹುದಾಗಿದೆ ಎಂದು ಸಭೆಗೆ ತಿಳಿಸಿದರು. ಹಿಂದಿನ ಸಭೆಯಲ್ಲಿ ಗೌರವಾನ್ವಿತ ಸದಸ್ಯರು ಈ ಒಂದು ಭಾರಿಗೆ ಅವಕಾಶ ಮಾಡುವಂತೆಯೂ ಹಾಗೂ ಮುಂದಿನ ಸಭೆಗಳಲ್ಲಿ ಸರ್ಕಾರದ ಸುತ್ತೋಲೆಯನ್ನು ಕಟ್ಟುನಿಟ್ಟಾಗಿ ಪಾಲಿಸಲು ತಿಳಿಸಲಾಗಿದೆ. ಆದರೂ ಸಹ ಪ್ರಸ್ತುತ ಸಭೆಗೆ ಜಿ.ಪಂ.ನ ಮಾನ್ಯ ಅಧ್ಯಕ್ಷರಿಂದ ಮಂಡಿಸಲಾಗಿರುವ ಪ್ರಸ್ತಾವನೆಗಳಿಗೆ ಈ ಕೆಳಕಂಡಂತೆ ಇರುತ್ತವೆ.

| | |
|---|---|
| 1 | ಶ್ರೀ ಲಕ್ಷ್ಮಯ್ಯ S/o ಲೇ: ಚೆನ್ನಿಗರಾಮಯ್ಯ, ಹಾಲುದೊಡ್ಡೇರಿ, ಶಿರಾ ತಾಲ್ಲೂಕು ರವರ ಹುಲ್ಲಿನ ಬಣವೆಗೆ ಆಕಸ್ಮಿಕ ಬೆಂಕಿ ಬಿದ್ದು ಸುಟ್ಟುಹೋಗಿದ್ದು ಧನಸಹಾಯ ಕೋರಿರುವ ಬಗ್ಗೆ. |
| 2 | ಶ್ರೀಮತಿ ಪುಟ್ಟಮಣಿಬೊಮ್ಮಣ್ಣ, ಜಿ.ಪಂ.ಸದಸ್ಯರು ಮನವಿ ನೀಡಿದ್ದು, ಶಿರಾ ತಾಲ್ಲೂಕು ಬುಕ್ಕಾಪಟ್ಟಣ ಹೋ: ಹೊಸಬಿಜ್ಜನಬೆಳ್ಳ ಗ್ರಾಮದ ವಾಸಿ ಶ್ರೀ ಪಾಪಣ್ಣ ಬಿನ್ ಕರಿಯಣ್ಣನವರ ಸುಮಾರು 60 ಚೀಲ ಕಡ್ಲೆಕಾಯಿಗೆ ಆಕಸ್ಮಿಕ ಬೆಂಕಿ ಬಿದ್ದು ಸುಟ್ಟುಹೋಗಿದ್ದು ಧನಸಹಾಯ ಕೋರಿರುವ ಬಗ್ಗೆ. |
| 3 | ಶ್ರೀಮತಿ ಪ್ರೇಮ ಮಹಾಲಿಂಗಪ್ಪ, ಮಾಜಿ ಅಧ್ಯಕ್ಷರು ಹಾಗೂ ಜಿ.ಪಂ.ಸದಸ್ಯರು ಮನವಿ ನೀಡಿದ್ದು, ಕೊರಟಗೆರೆ ತಾಲ್ಲೂಕು ಕೋಳಾಲ ಹೋ: ಬಂಡೆಪಾಳ್ಯ ವಾಸಿ ಶ್ರೀ ಚೌಡಪ್ಪ ರವರು ಕಡುಬಡವರಾಗಿದ್ದು ಕಾಲು ಸುಟ್ಟು ಹೋಗಿ ಚಿಕಿತ್ಸೆ ಪಡೆಯಬೇಕಾಗಿರುವುದರಿಂದ ಧನಸಹಾಯ ಕೋರಿರುವ ಬಗ್ಗೆ. |
| 4 | ಶ್ರೀ ಸೀತಾರಾಮಯ್ಯ S/o ಕರಿಯಪ್ಪ, ಕಳ್ಳಂಬೆಳ್ಳ ಹೋ: ಹಾಲುದೊಡ್ಡೇರಿ ಗ್ರಾಮವಾಸಿ ಶಿರಾ ತಾಲ್ಲೂಕು ರವರ ಹುಲ್ಲಿನ ಬಣವೆಗೆ ಆಕಸ್ಮಿಕ ಬೆಂಕಿ ಬಿದ್ದು ಸುಟ್ಟುಹೋಗಿದ್ದು ಧನಸಹಾಯ ಕೋರಿರುವ ಬಗ್ಗೆ. |
| 5 | ಶ್ರೀಮತಿ ಜಾನಮ್ಮ ರಾಮಚಂದ್ರಯ್ಯ, ಉಪಾಧ್ಯಕ್ಷರು ಮನವಿ ನೀಡಿದ್ದು, ಅವರ ಕ್ಷೇತ್ರ ವ್ಯಾಪ್ತಿಯ ಚಿ.ನಾ.ಹಳ್ಳಿ ತಾ: ಹಂದನಕೆರೆ ಹೋ: ದವನದಹೊಸಹಳ್ಳಿ ಗ್ರಾಮವಾಸಿ ಶ್ರೀ ಕರಿಯಪ್ಪ ಬಿನ್ ರಾಮಯ್ಯ ಎಂಬುವರ ಮನೆಯು ಆಕಸ್ಮಿಕ ಬೆಂಕಿ ಅನಾಹುತಕ್ಕೀಡಾಗಿ ಸಂಪೂರ್ಣ ಭಸ್ಮವಾಗಿದ್ದು ಧನಸಹಾಯ ಕೋರಿರುವ ಬಗ್ಗೆ. |
| 6 | ಶ್ರೀ ಚಿಕ್ಕರಂಗಯ್ಯ ಬಿನ್ ಲೇ:ರಂಗಪ್ಪ, ಕೂತಾರಹಳ್ಳಿ ಗ್ರಾಮ, ಬೇಗೂರು ಅಂಚೆ, ಕಸಬಾ ಹೋ: ಕುಣಿಗಲ್ ತಾಲ್ಲೂಕು ರವರು ಮಾನ್ಯ ಅಧ್ಯಕ್ಷರಿಗೆ ಮನವಿ ನೀಡಿದ್ದು, ಸದರಿಯವರಿಗೆ ಹೊಟ್ಟೆ ಆಪರೇಷನ್ ಆಗಿದ್ದು ಲೆಟರಿನ್ ಇದ್ದ ಜಾಗ ಮುಚ್ಚಿ ಬೇರೆ ಕಡೆ ಜಾಗ ಮಾಡಿಬಿಟ್ಟಿರುವುದರಿಂದ ಹೆಚ್ಚಿನ ಚಿಕಿತ್ಸೆಗಾಗಿ ಧನಸಹಾಯಕ ಕೋರಿರುವ ಬಗ್ಗೆ. |

ಮೇಲ್ಕಂಡ ಪ್ರಸ್ತಾವನೆಗಳನ್ನು ಮಾನ್ಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ ಗಮನಕ್ಕೆ ತಂದು ಕ್ರಮವಹಿಸಲು ಸಭೆಯು ತೀರ್ಮಾನಿಸಿತು

**(ಕ್ರಮ: ಮುಖ್ಯ ಲೆಕ್ಕಾಧಿಕಾರಿಗಳು ಜಿ.ಪಂ. ತುಮಕೂರು)**

ಸದಸ್ಯ ಕಾರ್ಯದರ್ಶಿಗಳು ಮಾತನಾಡಿ, 2013-14ನೇ ಸಾಲಿನಲ್ಲಿ ಸರ್ಕಾರದಿಂದ ಬಿಡುಗಡೆಯಾದ ಅನುದಾನದಲ್ಲಿ ಎನಾದರೂ ಹಣ ವ್ಯಪಗತವಾಗಿದ್ದರೆ ಸಂಕ್ಷಿಪ್ತ ವಿವರವನ್ನು ಸಭೆಗೆ ನೀಡಲು ಅಧಿಕಾರಿಗಳಿಗೆ ತಿಳಿಸಿದರು.

ಮಾನ್ಯ ಅಧ್ಯಕ್ಷರು ಮಾತನಾಡಿ, ಈ ಸಭೆಗೆ ಕೆಲವು ಇಲಾಖೆಗಳ ಅಧಿಕಾರಿಗಳು ಗೈರು ಹಾಜರಾಗಿ ಬೇರೆ ಸಿಬ್ಬಂದಿಗಳನ್ನು ನಿಯೋಜಿಸಿರುವುದು ಬಹಳ ವಿಷಾದನೀಯ ಹಾಗೂ ಗೈರು ಹಾಜರಾಗಿರುವ ಅಧಿಕಾರಿಗಳಿಗೆ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯವರ ಸಹಿಯಲ್ಲಿ ಕಾರಣ ಕೇಳಿ ನೋಟೀಸ್ ಜಾರಿ ಮಾಡಲು ಹಾಗೂ ಈ ಹಿಂದಿನ ಸಭೆಗಳಿಗೆ ಗೈರುಹಾಜರಾಗಿರುವ ಅಧಿಕಾರಿಗಳ ಮೇಲೆ ತೆಗೆದುಕೊಂಡ ಕ್ರಮದ ಬಗ್ಗೆ ಮಾಹಿತಿ ನೀಡಲು ಲೆಕ್ಕಾಧೀಕ್ಷಕರು-1, ಲೆಕ್ಕಶಾಖೆ, ಜಿ.ಪಂ.ರವರಿಗೆ ತಿಳಿಸಿದರು.

**(ಕ್ರಮ: ಲೆಕ್ಕಾಧೀಕ್ಷಕರು-1, ಲೆಕ್ಕಶಾಖೆ, ಜಿ.ಪಂ. ತುಮಕೂರು )**

ಮಾನ್ಯ ಅಧ್ಯಕ್ಷರು ವಿವಿಧ ಇಲಾಖೆಗಳ ಪ್ರಗತಿ ಪರಿಶೀಲನೆ ಬಗ್ಗೆ ಚರ್ಚೆ ಹಾಗೂ ಅನುದಾನ ವ್ಯಪಗತದ ವಿವರವನ್ನು ನೀಡಲು ಸಭೆಯಲ್ಲಿ ಹಾಜರಿದ್ದಅಧಿಕಾರಿಗಳಿಗೆ ತಿಳಿಸಿದರು.

ಮುಖ್ಯ ಯೋಜನಾದಿಕಾರಿಗಳು ಮಾತನಾಡಿ, 2013-14ನೇ ಸಾಲಿನಲ್ಲಿ ಯೋಜನೆ ಮತ್ತು ಯೋಜನೇತರ ಅಡಿಯಲ್ಲಿ ಸರ್ಕಾರದಿಂದ ಲೆಕ್ಕಶೀರ್ಷಿಕೆವಾರು ಲಿಂಕ್ ಡಾಕ್ಯೂಮೆಂಟ್/ಎಂಪಿಕ್ ಪ್ರಕಾರ ಬಿಡಗಡೆ, ಖರ್ಚು ಮತ್ತು ಉಳಿಕೆ ಅನುದಾನದ ವಿವರವನ್ನು ಸಭೆಗೆ ನೀಡುವಂತೆ ತಿಳಿಸಿದರು.

**1) ಶಿಕ್ಷಣ ಇಲಾಖೆ:-** ಇಲಾಖಾಧಿಕಾರಿಗಳು ಇಲಾಖೆಯ ಕಾರ್ಯಕ್ರಮಗಳ ಬಗ್ಗೆ ಮತ್ತು ಸರ್ಕಾರದಿಂದ 2013-14ನೇ ಸಾಲಿನಲ್ಲಿ ಬಿಡುಗಡೆ, ಖರ್ಚು, ಉಳಿಕೆಯಾದ ಅನುದಾನದ ವಿವರವನ್ನು ಸಭೆಗೆ ತಿಳಿಸಿದರು. ಮಾನ್ಯಅಧ್ಯಕ್ಷರು 2014-15ನೇ ಸಾಲಿನಲ್ಲಿ ವಡ್ಡರಹಳ್ಳಿ ಶಾಲೆಗೆ ಹೊಸ ಕಟ್ಟಡ ನಿರ್ಮಾಣ ಮಾಡಲು ಹಾಗೂ ಅರೆಗುಜ್ಜನಹಳ್ಳಿಗೆ ಹೊಸ ಕಟ್ಟಡ ನಿರ್ಮಾಣಕ್ಕೆ ಈ ಸಾಲಿನಲ್ಲಿ ಕ್ರಿಯಾ ಯೋಜನೆಯಲ್ಲಿ ಸೇರಿಸಿ ಸೂಕ್ತ ಕ್ರಮಕೈಗೊಳ್ಳುವಂತೆ ತಿಳಿಸಿದರು.

ಮಾನ್ಯ ಸದಸ್ಯರಾದ ಶ್ರೀಮತಿ:ದಾಕ್ಷಾಯಿಣಿ ರವರು ಮಾತನಾಡಿ, RMSA ಅಡಿ ಕೊರಟಗೆರೆ ತಾಲ್ಲೂಕಿನಲ್ಲಿ ಒಂದು ಕಡೆ ಕಾಮಗಾರಿ ಪ್ರಾರಂಭಿಸಿದ್ದು ಇನ್ನೊಂದು ಕಡೆ ಪ್ರಾರಂಭಿಸಿರುವುದಿಲ್ಲ; Sub-Agencyಗೆ ( ಚಂಪಕ ಏಜೆನ್ಸಿ) ಕಾಮಗಾರಿ ನಿರ್ಮಾಣಕ್ಕೆ ವಹಿಸಿದ್ದು ಒಂದು ವರ್ಷದಿಂದ ಪಾಯದ

ಹಂತದಲ್ಲಿಯೇ ಇದೆ ಎಂದು ತಿಳಿಸಿ ಶೀಘ್ರವಾಗಿ ಕಾಮಗಾರಿ ಮುಗಿಸಲು ಸೂಕ್ತ ಕ್ರಮಕೈಗೊಂಡು ವಿದ್ಯಾರ್ಥಿಗಳಿಗೆ ಅನುಕೂಲ ಕಲ್ಪಿಸಲು ತಿಳಿಸಿದರು. ಹೊಳವನಹಳ್ಳಿಯಲ್ಲಿ ಇರುವ ಹಳೇ ಕಟ್ಟಡ ಕೆಡವಿದ್ದಾರೆ; RMSA ಲ್ಲಿ ಈವರೆಗೆ ಕಾಮಗಾರಿ ಪ್ರಾರಂಭಿಸಲು ಕ್ರಮಕೈಗೊಂಡಿರುವುದಿಲ್ಲ; ವಿದ್ಯಾರ್ಥಿಗಳಿಗೆ ಬಹಳ ತೊಂದರೆ ಇದೆ; ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯವರ ಮುಖಾಂತರ ಪತ್ರ ವ್ಯವಹಾರ ಮಾಡಿ ಕಾಮಗಾರಿ ಪ್ರಾರಂಭಿಸುವಂತೆ ಇಲಾಖಾಧಿಕಾರಿಗಳಿಗೆ ತಿಳಿಸಿದರು.

ಮಾನ್ಯ ಸದಸ್ಯರಾದ ಶ್ರೀ ಟಿ.ಹೆಚ್.ಕೃಷ್ಣಪ್ಪನವರು ಮಾತನಾಡಿ, ಈ ಬಗ್ಗೆ ಹಿಂದಿನ ಸಭೆಯಲ್ಲಿ ಚರ್ಚೆಯಾಗಿರುತ್ತದೆ ಎಂದು ತಿಳಿಸಿದಾಗ ಇಲಾಖಾಧಿಕಾರಿಗಳು ರಾಜ್ಯಮಟ್ಟದಲ್ಲಿ ಈವರೆಗೆ ಅನುದಾನ ಬಿಡುಗಡೆಯಾಗಿರುವುದಿಲ್ಲ ದಕ್ಷಿಣ ಶೈಕ್ಷಣಿಕೆ ಜಿಲ್ಲೆಯಲ್ಲಿ ಒಟ್ಟು 66 ಕಟ್ಟಡಗಳಿವೆ; ಯಾವುದೇ ಕಟ್ಟಡಗಳನ್ನು ಡೆಮಾಲಿಷ್ ಮಾಡಿರುವುದಿಲ್ಲ; ತುಮಕೂರು ಶೈಕ್ಷಣಿಕ ಜಿಲ್ಲೆಯಲ್ಲಿ ಹೊಸಕಟ್ಟಡಗಳ ವಿವರವನ್ನು ಸಭೆಗೆ ನೀಡಿದರು. ಹಾಗೂ ರಾಜ್ಯ ಮಟ್ಟದಲ್ಲಿ ಅಗ್ರಿಮೆಂಟ್ ಆಗಿರುವುದಿಲ್ಲವೆಂದು ಸಭೆಗೆ ತಿಳಿಸಿದರು.

**(( ಕ್ರಮ: ಉಪ ನಿರ್ದೇಶಕರು, ಸಾ.ಶಿ.ಇ. ತುಮಕೂರು/ ಮಧುಗಿರಿ)**

**2) ತೋಟಗಾರಿಕೆ:** ಮಾನ್ಯ ಅಧ್ಯಕ್ಷರು ತೋಟಗಾರಿಕೆ ಇಲಾಖೆಯ ಕಾರ್ಯಕ್ರಮ/ಪ್ರಗತಿಯ ವಿವರಗಳನ್ನು ಉಪ ನಿರ್ದೇಶಕರು, ತೋಟಗಾರಿಕೆ ಇಲಾಖೆ ರವರಿಂದ ಪಡೆದರು. ಉಪ ನಿರ್ದೇಶಕರು, ತೋಟಗಾರಿಕೆ ಇಲಾಖೆ ರವರು ಮಾತನಾಡಿ, ಇಲಾಖೆಯ ಕಾರ್ಯಕ್ರಮಗಳ ಬಗ್ಗೆ ಮತ್ತು ಸರ್ಕಾರದಿಂದ 2013-14ನೇ ಸಾಲಿನಲ್ಲಿ ಬಿಡುಗಡೆ, ಖರ್ಚು, ಉಳಿಕೆಯಾದ ಅನುದಾನದ ಬಗ್ಗೆ ಸಭೆಗೆ ವಿವರಿಸಿದರು. ಮುಂದುವರೆದು ತೆಂಗು ಜನವರಿ-ಫೆಬ್ರವರಿ ಮಾಹೆಯಲ್ಲಿ ನಾಟಿ ಮಾಡಲಾಗುತ್ತದೆ; ತಿಪಟೂರು, ಶಿರಾ Formಗೆ ಅನುದಾನ ಬಿಡುಗಡೆ ಮಾಡಲಾಗುತ್ತಿದೆ; ಶೇ.100ರಷ್ಟು ಅನುದಾನ ಖರ್ಚಾಗಿರುತ್ತದೆ; ಶಿರಾ ತಾಲ್ಲೂಕು ಪಟ್ಟನಾಯಕನಹಳ್ಳಿ ಮತ್ತು ಶ್ರೀ ಸಿದ್ಧಗಂಗಾ ವಸ್ತು ಪ್ರದರ್ಶನಕ್ಕೆ ಅನುಕ್ರಮವಾಗಿ ರೂ.1.00ಲಕ್ಷ & ರೂ.2.00ಲಕ್ಷಗಳನ್ನು ನೀಡಲಾಗುತ್ತಿದೆ; ಸುಮಾರು 15 ತೋಟಗಾರಿಕೆ ಬೆಳೆಗಳ ಬುಕ್ ಲೆಟ್ ಮಾಡಿಸಲಾಗಿದೆ; ಸಾಮಾನ್ಯ ಮಾಹಿತಿ ಕರಪತ್ರಗಳ ಮುದ್ರಣ ಮಾಡಿಸಲಾಗಿದೆ ಎಂದು ತಿಳಿಸಿದರು.

ಮುಂದುವರೆದು ಮಾತನಾಡಿ, ಜೇನು ಸಾಕಾಣಿಕೆ ಬಗ್ಗೆ ವಿವರ ನೀಡುತ್ತಾ, ತೋಟಗಾರಿಕೆ ಬೆಳೆಯ ಉತ್ಪಾದಕತೆಯನ್ನು ಪರಾಗ ಸ್ಪರ್ಶದಿಂದ ಹೆಚ್ಚಿಸಲು ಜೇನು ಸಾಗಾಣಿಕೆಯನ್ನು ಉತ್ತೇಜಿಸುವ ಸಲುವಾಗಿ ರೈತರಿಗೆ ಜೇನು ಸಾಗಾಣಿಕೆ ಬಗ್ಗೆ ತರಭೇತಿಯನ್ನು ಸಹ ಕೊಡಿಸಲಾಗುತ್ತಿದೆ; ಗುಬ್ಬಿ-ತುಮಕೂರು-ಪಾವಗಡ ತಾಲ್ಲೂಕಿನಲ್ಲಿ ಈಗಾಗಲೇ ತರಭೇತಿ ನೀಡಲಾಗಿದೆ; NHM ಯೋಜನೆಯಡಿ ಈ ಜಿಲ್ಲೆಗೆ ಈ ವರ್ಷ 5 ಜನ ಬಂದಿರುತ್ತಾರೆ; ಜೇನುಹುಳು ಹಿಡಿದು ಬಾಕ್ಸ್ ನಲ್ಲಿ

ಸಂಗ್ರಹಿಸಲಾಗುತ್ತದೆ; ಒಂದು ಪೆಟ್ಟಿಗೆಗೆ ರೂ.1,600/- ಖರ್ಚು ಬರುತ್ತಿದ್ದು, ಜೇನು ಕೃಷಿಕರಿಗೆ ಶೇ.50ರಷ್ಟು ಸಹಾಯಧನ ಕೊಡಲಾಗುತ್ತಿದೆ; ಈಗ ಹೊಸದಾಗಿ ಯಾಂತ್ರೀಕರಣ ಯೋಜನೆ ಜಾರಿಯಾಗಿದೆ ಎಂದು ಸಭೆಗೆ ವಿವರಿಸಿದರು. ಜೇನು ಕೃಷಿ ಸಹಾಯಕರಿಗೆ ಪ್ರಸ್ತುತ ರೂ.4,900/- ಸಂಬಳ ನೀಡಲಾಗುತ್ತಿದೆ; ಹಾಗೂ ಇಲಾಖೆಗೆ ಬಿಡುಗಡೆಯಾದ ಅನುದಾನ ಯಾವುದು ವ್ಯಪಗತವಾಗಿರುವುದಿಲ್ಲವೆಂದು ತಿಳಿಸಿದರು.

**3) ಮೀನುಗಾರಿಕೆ:** ಇಲಾಖಾಧಿಕಾರಿಗಳು ಇಲಾಖೆಯ ಕಾರ್ಯಕ್ರಮಗಳ ಬಗ್ಗೆ ಮತ್ತು ಸರ್ಕಾರದಿಂದ 2013-14ನೇ ಸಾಲಿನಲ್ಲಿ ಬಿಡುಗಡೆ, ಖರ್ಚು, ಉಳಿಕೆಯಾದ ಅನುದಾನದ ವಿವರವನ್ನು ಸಭೆಗೆ ತಿಳಿಸಿದರು. ಯಾವುದೇ ಅನುದಾನ ವ್ಯಪಗತವಾಗಿರುವುದಿಲ್ಲ; ಮಾರುಕಟ್ಟೆ ನಿರ್ಮಾಣಕ್ಕೆ ರೂ.50.00ಸಾವಿರ ಸಹಾಯಧನ ಕೊಡಲಾಗುತ್ತಿದೆ; ಜೂನ್ ನಿಂದ ಆಗಸ್ಟ್ ನವರೆಗೆ ಮಾತ್ರ ಮೀನು ಉತ್ಪತ್ತಿಯಾಗುತ್ತದೆ; ಜಿಲ್ಲೆಯಲ್ಲಿ 22ಲಕ್ಷ ಮೀನುಮರಿ ಸರಬರಾಜು ಮಾಡಲಾಗಿದೆ ಎಂದು ಸಭೆಗೆ ತಿಳಿಸಿದರು. ಮಾನ್ಯ ಸದಸ್ಯರಾದ ಶ್ರೀ ಟಿ.ಹೆಚ್. ಕೃಷ್ಣಪ್ಪನವರು ಮಾತನಾಡಿ, ಯಾವ-ಯಾವ ತಾಲ್ಲೂಕಿಗೆ ಎಷ್ಟೆಷ್ಟು ಮೀನುಮರಿ ಸರಬರಾಜು ಮಾಡಲಾಗಿದೆ ಎಂದು ಪ್ರಶ್ನಿಸಿದಾಗ ಇಲಾಖಾಧಿಕಾರಿಗಳು ಎಲ್ಲೆಲ್ಲಿ Rate ಇದೆಯೋ ಅಲ್ಲಿಗೆ ಸರಬರಾಜು ಮಾಡಲಾಗುತ್ತಿದೆ; ಮಧುಗಿರಿ ತಾಲ್ಲೂಕಿಗೆ 3.5ಲಕ್ಷ ಮೀನುಮರಿ ಸರಬರಾಜು ಮಾಡಲಾಗಿದೆ; ಇನ್ನುಳಿದ ತಾಲ್ಲೂಕಿಗಳಿಗೆ 1 ರಿಂದ 1.5ಲಕ್ಷ ಮೀನುಮರಿ ವಿತರಿಸಲಾಗಿದೆ ಎಂದು ತಿಳಿಸಿದರು. ಮುಂದುವರೆದು ಮಾನ್ಯ ಸದಸ್ಯರು ಕೆರೆಗಳಿಗೆ ಹೋಗಿ ಮೀನು ಬೆಳವಣಿಗೆಯಾಗಿರುವ ಬಗ್ಗೆ ವಿವರ ನೀಡುವಂತೆ ತಿಳಿಸಿದರು. ಹಾಗೂ ಜಿಲ್ಲೆಯ ಸ್ಥಳೀಯರಿಗೆ ಆಧ್ಯತೆ ನೀಡಿ ಮೊದಲು ಅವರಿಗೆ ಸರಬರಾಜು ಮಾಡಿ ಮಿಕ್ಕರೆ ಬೇರೆಡೆಗೆ ಸರಬರಾಜು ಮಾಡಲು ತಿಳಿಸಿದರು.

ಮುಂದುವರೆದು ಮಾನ್ಯ ಸದಸ್ಯರು ಮಾತನಾಡಿ, ನಿರ್ಗತಿಕ ಮೀನುಗಾರರಿಗೆ ಮನೆ ಕಟ್ಟಿಕೊಳ್ಳುವುದಕ್ಕೆ ಸೌಲಭ್ಯ ಒದಗಿಸುವಂತೆ ತಿಳಿಸಿದಾಗ ಫಲಾನುಭವಿಗಳಿಗೆ ಮನೆ ಕಟ್ಟಿಕೊಳ್ಳಲು ಕನಿಷ್ಟ 6 ತಿಂಗಳು ಕಾಲಾವಕಾಶ ನೀಡಲಾಗುತ್ತಿದೆ; ಈ ವರ್ಷದಿಂದ ರೂ. 1.25ಲಕ್ಷಗಳನ್ನು RTGS ಮೂಲಕ ಹಣ ಪಾವತಿ ಮಾಡಲಾಗುತ್ತಿದೆ; 125 ಸೈಕಲ್ ಗಳನ್ನು ಇಡೀ ಜಿಲ್ಲೆಗೆ ಕೊಡಲಾಗಿದೆ; ಬಲೆಗಳನ್ನು ಸಹ ನೀಡಲಾಗುತ್ತಿದೆ ಎಂದು ತಿಳಿಸಿದರು.

ಮಾನ್ಯ ಸದಸ್ಯರಾದ ಶ್ರೀಮತಿ ದಾಕ್ಷಾಯಣಿರವರು ಮಾತನಾಡಿ, ಕೆರೆಗಳಲ್ಲಿ ಮೀನು ಸತ್ತುಹೋಗಿರುವುದಾಗಿ ಇತ್ತೀಚೆಗೆ ಪತ್ರಿಕೆಗಳಲ್ಲಿ ವರದಿಯಾಗಿರುತ್ತದೆ; ಕೆರೆಗಳಿಗೆ 50ಸಾವಿರ ಮರಿ ಬಿಡಬೇಕು ಆದರೆ 1.5ಲಕ್ಷ ಮರಿಗಳನ್ನು ಬಿಟ್ಟಿರುತ್ತಾರೆ ಮಾಲಿನ್ಯದಿಂದ ಮೀನುಗಳು ಸತ್ತಿರುತ್ತವೆ ಎಂದು ಅಧಿಕಾರಿಗಳು ಸಭೆಗೆ ತಿಳಿಸಿದರು.

**4) ಸಾಮಾಜಿಕ ಅರಣ್ಯ:** ಇಲಾಖಾಧಿಕಾರಿಗಳು ಇಲಾಖೆಯ ಕಾರ್ಯಕ್ರಮಗಳ ಬಗ್ಗೆ ಮತ್ತು ಸರ್ಕಾರದಿಂದ 2013-14ನೇ ಸಾಲಿನಲ್ಲಿ ಬಿಡುಗಡೆ, ಖರ್ಚು, ಉಳಿಕೆಯಾದ ಅನುದಾನದ ವಿವರವನ್ನು ಸಭೆಗೆ ತಿಳಿಸಿದರು.

ಮಾನ್ಯಅಧ್ಯಕ್ಷರು ಮಾತನಾಡಿ, ನೆಡುತೋಪು ಹಾಗೂ ಸಸಿಗಳನ್ನು ಎಲ್ಲೆಲ್ಲಿ ಬೆಳೆಸಲಾಗಿದೆ ಹಾಗೂ ನಿರ್ವಹಣೆ ಬಗ್ಗೆ ಪ್ರಶ್ನಿಸಲಾಗಿ ಚಿ.ನಾ.ಹಳ್ಳಿ ತಾ:ನಲ್ಲಿ 15 ಹೇಕ್ಟೇರ್ ನಲ್ಲಿ ನೆಡುತೋಪು ರಸ್ತೆಬದಿಯಲ್ಲಿ ನಿರ್ಮಾಣ ಮಾಡಲಾಗಿದೆ; ಜಿ.ಪಂ.ರಸ್ತೆಗಳ ಬದಿ ಗಿಡಬೆಳೆಸಿರುವ ವಿವರ ನೀಡುವಂತೆ ತಿಳಿಸಿದರು. ಗೋಮಾಳ, ಶಾಲಾ ಆವರಣಗಳಲ್ಲಿ ಸಸಿಗಳನ್ನು ಬೆಳೆಸಿ ನಿರ್ವಹಿಸಲಾಗುತ್ತಿದೆ. ಪಾವಗಡ ತಾ:ನಲ್ಲಿ 13 ಕಿಮೀ. ನೆಡು ತೋಪು ಮಾಡಲಾಗಿದೆ; ತುಮಕೂರು NH-4 Link Roadಲ್ಲಿ 5 ಕಿಮೀ ಮಾಡಲಾಗಿದೆ; ಚಿಕ್ಕಬೆಳ್ಳಾವಿಯಲ್ಲಿ ಮಾಡಲಾಗಿದೆ; ಒಟ್ಟು 46ಕಿಮೀ ಮಾಡಿ ರೂ.12.56ಲಕ್ಷ ಖರ್ಚು ಮಾಡಲಾಗಿದೆ ಎಂದು ಸಭೆಗೆ ತಿಳಿಸಿದರು. ಸಸಿ/ಗಿಡಗಳಿಗೆ ಜನವರಿ, ಫೆಬ್ರವರಿ ಮತ್ತು ಮಾರ್ಚ್ ಮಾಹೆಯಲ್ಲಿ ಪ್ರತಿ ತಿಂಗಳು ಐದ್ಯೆದು ಬಾರಿ ನೀರು ಹಾಕಿ ನಿರ್ವಹಿಸಲಾಗಿದೆ.

**ಮುಂದುವರೆದು ಈ ಸಂಬಂಧ (ಕೊರಟಗೆರೆ-ತುಮಕೂರು-ಗುಬ್ಬಿ) ಸಮಿತಿಯ ಸದಸ್ಯರ ತಂಡದೊಂದಿಗೆ ಪರಿವೀಕ್ಷಿಸಲು ದಿನಾಂಕ ನಿಗಧಿಪಡಿಸಲು ಮು.ಲೆ.ಅ.ರವರಿಗೆ ತಿಳಿಸಿದರು.**

ಮಾನ್ಯ ಸದಸ್ಯರಾದ ಶ್ರೀ ರಾಮಚಂದ್ರಯ್ಯ ನವರು ಮಾತನಾಡಿ, ಸೀಗೆಹಳ್ಳಿ ಅರಣ್ಯವನ್ನು 8 ವರ್ಷದ ಹಿಂದೆ ಹರಾಜು ಮಾಡಲಾಗಿದೆ. ಈಗ ಅಲ್ಲಿ ನಿವೇಶನ ಏನಾದರೂ ಮಾಡಿದ್ದೀರಾ ಎಂದು ಪ್ರಶ್ನಿಸಿದಾಗ, ಮುಂದಿನ ಸಾಮಾನ್ಯ ಸಭೆಯಲ್ಲಿ ಪೂರ್ಣ ಮಾಹಿತಿಯನ್ನು ನೀಡುವಂತೆ ಮಾನ್ಯಅಧ್ಯಕ್ಷರು ತಿಳಿಸಿದರು.

**( ಕ್ರಮ: DCF Social Forest, ತುಮಕೂರು)**

**5) ಕೃಷಿ ಇಲಾಖೆ:** ಇಲಾಖಾಧಿಕಾರಿಗಳು ಇಲಾಖೆಯ ಕಾರ್ಯಕ್ರಮಗಳ ಬಗ್ಗೆ ಮತ್ತು ಸರ್ಕಾರದಿಂದ 2013-14ನೇ ಸಾಲಿನಲ್ಲಿ ಬಿಡುಗಡೆ, ಖರ್ಚು, ಉಳಿಕೆಯಾದ ಅನುದಾನದ ವಿವರವನ್ನು ಸಭೆಗೆ ತಿಳಿಸಿದರು. ಮುಂದುವರೆದು ಶೇ.96ರಷ್ಟು ಹಣ ಬಳಕೆಯಾಗಿರುತ್ತದೆ; ಹನಿ ನೀರಾವರಿಗೆ ಬಿಡುಗಡೆಯಾದ ಅನುದಾನ ರೂ.1.26ಲಕ್ಷ ವ್ಯಪಗತವಾಗಿರುತ್ತದೆ. State sectorಲ್ಲಿ ಹೆಚ್ಚು Fund ಇತ್ತು; ಫಲಾನುಭವಿಗಳಿಗೆ ಹಣ ಬಿಡುಗಡೆಯಾಗಿರುತ್ತದೆ; ಹೆಚ್ಚಿಗೆ ರೂ.1.26 ಉಳಿಕೆಯಾಗಿರುತ್ತದೆ. ಪಾವಗಡ ತಾಲ್ಲೂಕಿನಿಂದ ಪೈಪ್ ಗಳಿಗೆ ಮಾರ್ಚ್ ಅಂತ್ಯದಲ್ಲಿ ಬೇಡಿಕೆ ಬಂದಿತ್ತು. ಒಂದು ಯೂನಿಟ್ ಗೆ ರೂ.15,000/-ಗಳನ್ನು ಕೊಡಬಹುದು; ಸಣ್ಣ ಮತ್ತು ಅತಿ ಸಣ್ಣ ರೈತರಿಗೆ ಪೈಪ್ ಗಳನ್ನು ಕೊಡಲಾಗುತ್ತಿದೆ ಎಂದು ತಿಳಿಸಿದರು.

ಮಾನ್ಯ ಸದಸ್ಯರಾದ ಶ್ರೀ ಟಿ.ಹೆಚ್. ಕೃಷ್ಣಪ್ಪನವರು ಮಾತನಾಡಿ, ಗಂಗಾ ಕಲ್ಯಾಣ ಯೋಜನೆಯಲ್ಲಿ ಕೊಳವೆಬಾವಿ ಕೊರೆಸಿರುವ ಬಡರೈತರಿಗೆ ಸಹಾಯಧನ ಅಥವಾ ಪೈಪ್ ವಿತರಿಸಲು ತಿಳಿಸಿದರು.

**( ಕ್ರಮ: ಜಂಟಿ ಕೃಷಿ ನಿರ್ದೇಶಕರು, ಕೃಷಿ ಇಲಾಖೆ, ತುಮಕೂರು)**

**6) ರೇಷ್ಮೆ ಇಲಾಖೆ:** ಇಲಾಖಾಧಿಕಾರಿಗಳು ಇಲಾಖೆಯ ಕಾರ್ಯಕ್ರಮಗಳ ಬಗ್ಗೆ ಮತ್ತು ಸರ್ಕಾರದಿಂದ 2013-14ನೇ ಸಾಲಿನಲ್ಲಿ ಬಿಡುಗಡೆ, ಖರ್ಚು, ಉಳಿಕೆಯಾದ ಅನುದಾನದ ವಿವರವನ್ನು ಸಭೆಗೆ ತಿಳಿಸಿದರು.

ವೇತನಾಂಶದಲ್ಲಿ ರೂ.65.00ಲಕ್ಷ ವ್ಯಪಗತವಾಗಿ ವಾಪಸ್ ಹೋಗಿರುತ್ತದೆ; ಬೈವೋಲ್ಟಿನ್ ಗೆ ಹೆಚ್ಚು ಬೆಡಿಕೆ ಇದೆ; ಇದರಿಂದ ಆದಾಯ ಹೆಚ್ಚು ಬರುತ್ತದೆ ;ತುರುವೇಕೆರೆ-ಗುಬ್ಬಿಯಲ್ಲಿ ಹೆಚ್ಚು ಬೈವೋಲ್ಟಿನ್ ಗೆ ಬೇಡಿಕೆ ಇರುತ್ತದೆ ಎಂದು ಸಭೆಗೆ ತಿಳಿಸಿದರು.

**7) ಅಕ್ಷರ ದಾಸೋಹ:** ಜಿಲ್ಲಾ ನೋಡಲ್ ಅಧಿಕಾರಿಗಳು ಇಲಾಖೆಯ ಕಾರ್ಯಕ್ರಮಗಳ ಬಗ್ಗೆ ಮತ್ತು ಸರ್ಕಾರದಿಂದ 2013-14ನೇ ಸಾಲಿನಲ್ಲಿ ಬಿಡುಗಡೆ, ಖರ್ಚು, ಉಳಿಕೆಯಾದ ಅನುದಾನದ ವಿವರವನ್ನು ಸಭೆಗೆ ತಿಳಿಸಿದರು. ಮಾನ್ಯ ಅಧ್ಯಕ್ಷರು ಅಡುಗೆ ಕೋಣೆಗಳ ಬಗ್ಗೆ ಪ್ರಶ್ನಿಸಲಾಗಿ, ಅಧಿಕಾರಿಗಳು ವಿವರವನ್ನು ನೀಡುತ್ತಾ ಗುಬ್ಬಿ ತಾ: ಕೋಡಿಹಳ್ಳಿ-ಜಲ್ಲಿಪಾಳ್ಯದಲ್ಲಿ ಅಡುಗೆಕೋಣೆ ನಿರ್ಮಾಣವಾಗಿರುತ್ತದೆ. ಸರ್ಕಾರದಿಂದ ಮಾರ್ಚ್ ಅಂತ್ಯದಲ್ಲಿ ಉಳಿಕೆ ರೂ.25.00ಲಕ್ಷ ಬಂದಿದ್ದುಅದನ್ನು ಬಿಡುಗಡೆ ಮಾಡಲಾಗಿದೆ; ತುಮಕೂರು ತಾ:ನಲ್ಲಿ 76 ಅಡುಗೆಕೋಣೆಗಳಲ್ಲಿ 56 ಪೂರ್ಣಗೊಂಡಿರುತ್ತದೆ; ಎಲ್ಲಾ ಅನುದಾನಿತ ಶಾಲೆಗಳಿಗೆ ಸೌಲಭ್ಯ ಒದಗಿಸಲಾಗಿದೆ; ಮಾನ್ಯಅಧ್ಯಕ್ಷರು ಓಬಳಾಪುರ-ಬಿಳಧರ ಪ್ರೌಢಶಾಲೆಗಳಿಗೆ ಅಡುಗೆಕೋಣೆ ನಿರ್ಮಿಸಲು ಕ್ರಮವಹಿಸುವಂತೆಯೂ, ಕಳ್ಳಂಬೆಳ್ಳ ಹೋ:ಯ ಪಾಳೇನಹಳ್ಳಿ ಶಾಲೆಯ ಅಡುಗೆಕೋಣೆ ನಿರ್ಮಾಣಕ್ಕೆ 3 ಬಾರಿ ಹಣ ತೆಗೆದುಕೊಂಡಿದ್ದರೂ ಈವರೆಗೂ ಕಾಮಗಾರಿ ಪೂರ್ಣಗೊಂಡಿರುವುದಿಲ್ಲ ಕೂಡಲೇ ಪೂರ್ಣಗೊಳಿಸುವಂತೆ ಕ್ರಮವಹಿಸಲು ತಿಳಿಸಿದರು.

ಮಾನ್ಯ ಸದಸ್ಯರಾದ ಶ್ರೀಮತಿ ದಾಕ್ಷಾಯಣಿ ರವರು ಮಾತನಾಡಿ, ಅಡುಗೆ ಮನೆ ನಿರ್ಮಾಣದ ಬಗ್ಗೆವಿವರ ಪಡೆದು ಹೆಚ್ಚುವರಿ ಕೊಠಡಿಗಳಿರದಿದ್ದಲ್ಲಿ ಅಡುಗೆ ಮನೆ ನಿರ್ಮಾಣಕ್ಕೆ ಕ್ರಮಕೈಗೊಳ್ಳಲು ಹಾಗೂ ಅನುದಾನಕ್ಕೆ ಒಳಪಡುವ ಫ್ರೌಡಶಾಲೆಗಳಲ್ಲಿ ಹೆಚ್ಚುವರಿ ಕೊಠಡಿ ಇರುವುದಿಲ್ಲವೋ ಅಲ್ಲಿ ಸಂಗ್ರಹಣಾ ಕೊಠಡಿ ಕೊಡಲು ತಿಳಿಸಿದಾಗ ಪೂರ್ಣಮಾಹಿತಿಯನ್ನು ಒದಗಿಸುವಂತೆ ಮಾನ್ಯ

ಸದಸ್ಯರಾದ ಶ್ರೀ ಟಿ.ಹೆಚ್.ಕೃಷ್ಣಪ್ಪನವರು ತಿಳಿಸಿ, ತಾಲ್ಲೂಕುವಾರು Matching Grant ನೀಡಿ ಸಿ.ಎಸ್.ಪುರ ಹೋ: ಹಿಂಡಿಸ್ಕೆರೆ ಶಾಲೆಯಲ್ಲಿ ಅಕ್ಷರದಾಸೋಹ ಕಟ್ಟಡ ಪೂರ್ಣಗೊಳಿಸಲು ತಿಳಿಸಿದರು.

**( ಕ್ರಮ: ಜಿಲ್ಲಾ ನೋಡಲ್ ಅಧಿಕಾರಿಗಳು, ಅಕ್ಷರ ದಾಸೋಹ, ತುಮಕೂರು)**

**8) ವಯಸ್ಕರ ಶಿಕ್ಷಣ ಇಲಾಖೆ:-** ಜಿಲ್ಲಾ ವಯಸ್ಕರ ಶಿಕ್ಷಣ ಇಲಾಖಾಧಿಕಾರಿಗಳು ಇಲಾಖೆಯ ಕಾರ್ಯಕ್ರಮಗಳ ಬಗ್ಗೆ ಮತ್ತು ಸರ್ಕಾರದಿಂದ 2013-14ನೇ ಸಾಲಿನಲ್ಲಿ ಬಿಡುಗಡೆ, ಖರ್ಚು, ಉಳಿಕೆಯಾದ ಅನುದಾನದ ವಿವರವನ್ನು ಸಭೆಗೆ ತಿಳಿಸಿದರು. ಮುಂದುವರೆದು ಪ.ಜಾ/ಪ.ಪಂ. ಫಲಾನುಭವಿಗಳಿಗೆ ತರಭೇತಿಯನ್ನು ನೀಡಲಾಗುತ್ತಿದೆ; ಸರ್ಕಾರದಿಂದ ಬಿಡುಗಡೆಯಾದ ಅನುದಾನ ಪೂರ್ಣ ಬಳಕೆಯಾಗಿರುತ್ತದೆ; ಮಧುಗಿರಿ ಶೈಕ್ಷಣಿಕ ಜಿಲ್ಲೆಗೆ ಹೆಚ್ಚುವರಿ ಅನುದಾನ ಕೋರಲಾಗಿದೆ ಎಂದು ಸಭೆಗೆ ತಿಳಿಸಿದರು.

**10) ಯುವಜನ ಸೇವೆ & ಕ್ರೀಡಾ ಇಲಾಖೆ:-** ಇಲಾಖೆಯ ಕಾರ್ಯಕ್ರಮಗಳ ಬಗ್ಗೆ ಮತ್ತು ಸರ್ಕಾರದಿಂದ 2013-14ನೇ ಸಾಲಿನಲ್ಲಿ ಬಿಡುಗಡೆ, ಖರ್ಚು, ಉಳಿಕೆಯಾದ ಅನುದಾನದ ವಿವರವನ್ನು ಸಭೆಗೆ ತಿಳಿಸಿದರು.

**11) ಆರೋಗ್ಯ ಇಲಾಖೆ:-** ಜಿಲ್ಲಾ ಆರೋಗ್ಯ & ಕುಟುಂಬ ಕಲ್ಯಾಣಾಧಿಕಾರಿಗಳು ಇಲಾಖೆಯ ಕಾರ್ಯಕ್ರಮಗಳ ಬಗ್ಗೆ ಮತ್ತು ಸರ್ಕಾರದಿಂದ 2013-14ನೇ ಸಾಲಿನಲ್ಲಿ ಬಿಡುಗಡೆ, ಖರ್ಚು, ಉಳಿಕೆಯಾದ ಅನುದಾನದ ವಿವರವನ್ನು ಸಭೆಗೆ ತಿಳಿಸಿದರು. ಮುಂದುವರೆದು ವೈದ್ಯರುಗಳ ವರ್ಗಾವಣೆಯಿಂದ ವೇತನಾಂಶದ ಹಣ ಉಳಿಕೆಯಾಗಿರುತ್ತದೆ; ಕಟ್ಟಡ ಕಾಮಗಾರಿಗಳಲ್ಲಿ ತುಮಕೂರು-1, ಕುಣಿಗಲ್-1 ದೊಡ್ಡಗುಣಿ-ಬಿದರೆ-ಅದಲಗೆರೆ ಕಟ್ಟಡ ಕಾಮಗಾರಿ ಪ್ರಾರಂಭಿಸಬೇಕಿದೆ; ಹೆಬ್ಬೂರು ಕಟ್ಟಡ ಕಾಮಗಾರಿಯ ಹಣ ವ್ಯಪಗತವಾಗಿರುತ್ತದೆ; ಒಟ್ಟಾರೆ 5 ಕಾಮಗಾರಿಗಳು ಪ್ರಾರಂಭವಾಗದೆ ಅನುದಾನ ವ್ಯಪಗತವಾಗಿರುತ್ತದೆ ಎಂದು ಸಭೆಗೆ ತಿಳಿಸಿದರು.

ಮಾನ್ಯ ಸದಸ್ಯರಾದ ಶ್ರೀ ಟಿ.ಹೆಚ್. ಕೃಷ್ಣಪ್ಪನವರು ಆರೋಗ್ಯ ರಕ್ಷ ಸಮಿತಿಯ ಬಗ್ಗೆ ವಿವರ ಪಡೆದು, ಸಮಿತಿಯಲ್ಲಿ A.C.ರವರು Chairman ಆಗಿದ್ದು ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಗ್ರಾ.ಪಂ.ನ ಅಧ್ಯಕ್ಷರು ಸಮಿತಿ Chairman ಆಗಿರುತ್ತಾರೆ; ಔಷಧಿ ಖರೀದಿ, ಹುಚ್ಚುನಾಯಿ ಕಡಿತಕ್ಕೆ ಹಾಗೂ ಪರಿಕರಗಳ ದುರಸ್ಥಿಗೆ ಅನುದಾನ ಸದ್ಬಳಕೆ ಮಾಡಲಾಗಿರುತ್ತದೆ ಮತ್ತು ಸಿ.ಎಸ್.ಪುರ ಆರೋಗ್ಯ ಕೇಂದ್ರದ ವಾಹನ 108 ದುರಸ್ಥಿ ಮಾಡಿಸಲಾಗಿದೆ ಎಂದು ತಿಳಿಸಿದರು.

ಮಾನ್ಯ ಸದಸ್ಯರಾದ ಶ್ರೀಮತಿ ದಾಕ್ಷಾಯಣಿ ರವರು ಮಾತನಾಡಿ, ಕೊರಟಗೆರೆ ತಾ: ಹೊಳವನಹಳ್ಳಿ ಹೊಸ ಕಟ್ಟಡವನ್ನು Social Welfare ಗೆ shift ಮಾಡುವಂತೆ ತಿಳಿಸಿದರು.

ಮಾನ್ಯ ಅಧ್ಯಕ್ಷರು ಮಾತನಾಡಿ, ಈಗ ಮಳೆಗಾಲ ಪ್ರಾರಂಭವಾಗುತ್ತಿದ್ದು, ಗ್ರಾಮೀಣ ಪ್ರದೇಶಗಳಲ್ಲಿ ಚರಂಡಿಗಳಿಂದ ಸೊಳ್ಳೆ-ನೊಣ ಹಾವಳಿ ಹೆಚ್ಚಾಗಿ ಮಲೇರಿಯಾ ಹಾಗೂ ಇನ್ನಿತರೆ ರೋಗದಿಂದ ಜನರು ಬಳಲುತ್ತಿದ್ದಾರೆ; ಆದುದರಿಂದ ಸ್ವಚ್ಛತೆ ಕಾಪಾಡಲು ಸೂಕ್ತ ಕ್ರಮವಹಿಸಲು DHO ರವರಿಗೆ ತಿಳಿಸಿದರು.

**( ಕ್ರಮ: ಜಿಲ್ಲಾ ಆರೋಗ್ಯ & ಕುಟುಂಬ ಕಲ್ಯಾಣಾಧಿಕಾರಿಗಳು, ತುಮಕೂರು)**

**12) ಆಯುಷ್ ಇಲಾಖೆ:-** ಜಿಲ್ಲಾ ಆಯುಷ್ ಅಧಿಕಾರಿಗಳು ಇಲಾಖೆಯ ಕಾರ್ಯಕ್ರಮಗಳ ಬಗ್ಗೆ ಮತ್ತು ಸರ್ಕಾರದಿಂದ 2013-14ನೇ ಸಾಲಿನಲ್ಲಿ ಬಿಡುಗಡೆ, ಖರ್ಚು, ಉಳಿಕೆಯಾದ ಅನುದಾನದ ವಿವರವನ್ನು ಸಭೆಗೆ ತಿಳಿಸಿದರು.

ಮಾನ್ಯ ಅಧ್ಯಕ್ಷರು ಪಪ್ಪಾಯಿ ಹಣ್ಣು-ಎಲೆ ಸೇವಿಸಿದರೆ ಡೆಂಗ್ಯೂ ಬರುವ ಸಾಧ್ಯತೆ ಕಡಿಮೆ ಇರುತ್ತದೆ ಜನರಿಗೆ ಇದರ ಅರಿವು ಮೂಡಿಸಲು ತಿಳಿಸಿದರು; ಡೆಂಗ್ಯೂ ಪೀಡಿತರನ್ನು ತಪಾಸಣೆ ಮಾಡಿ ಹೆಚ್ಚಿನ ಚಿಕಿತ್ಸೆಗಾಗಿ ಬೆಂಗಳೂರಿಗೆ ಕಳುಹಿಸಿಕೊಡುವ ಏರ್ಪಾಡು ಮಾಡಲಾಗುತ್ತಿದೆ; ಜಿಲ್ಲೆಯಲ್ಲಿ 25ಜನ ಆಯುಷ್ ವೈದ್ಯರು ಕಾರ್ಯನಿರ್ವಹಿಸುತ್ತದ್ದಾರೆ ಎಂದು ಸಭೆಗೆ ತಿಳಿಸಿದರು.

**13) ಪರಿಶಿಷ್ಟ ವರ್ಗ:** ಜಿಲ್ಲಾ ಅಧಿಕಾರಿಗಳು ಗೈರು ಹಾಜರಾಗಿದ್ದು ನಿಯೋಜಿತ ಸಿಬ್ಬಂದಿಯವರು ಇಲಾಖೆಯ ಕಾರ್ಯಕ್ರಮಗಳ ಬಗ್ಗೆ ಮತ್ತು ಸರ್ಕಾರದಿಂದ 2013-14ನೇ ಸಾಲಿನಲ್ಲಿ ಬಿಡುಗಡೆ, ಖರ್ಚು, ಉಳಿಕೆಯಾದ ಅನುದಾನದ ವಿವರವನ್ನು ಸಭೆಗೆ ತಿಳಿಸಿದರು.

ಮಾನ್ಯ ಸದಸ್ಯರಾದ ಶ್ರೀ ಟಿ.ಹೆಚ್. ಕೃಷ್ಣಪ್ಪನವರು ಪುಸ್ತಕ ಭಂಡಾರ ದಿಂದ ವಿದ್ಯಾರ್ಥಿಗಳಿಗೆ ಸರಬರಾಜು ಮಾಡಲಾಗಿರುವ ಪುಸ್ತಕದ ವಿವರ ಪಡೆದು, ಈ ಬಗ್ಗೆ ಪ.ಜಾ/ಪ.ಪಂ.ದ ವಿದ್ಯಾರ್ಥಿಗಳಿಗೆ ಅನುಕೂಲ ಕಲ್ಪಿಸಿ ಕೊಟ್ಟಿರುವ ವಿವರ ನೀಡುವಂತೆ ತಿಳಿಸಿದರು.

**( ಕ್ರಮ: ಜಿಲ್ಲಾ ಅಧಿಕಾರಿಗಳು, ಪರಿಶಿಷ್ಟ ವರ್ಗ, ತುಮಕೂರು)**

**14) ಬಿ.ಸಿ.ಎಂ:-** ಇಲಾಖೆಯ ಕಾರ್ಯಕ್ರಮಗಳ ಬಗ್ಗೆ ಮತ್ತು ಸರ್ಕಾರದಿಂದ 2013-14ನೇ ಸಾಲಿನಲ್ಲಿ ಬಿಡುಗಡೆ, ಖರ್ಚು, ಉಳಿಕೆಯಾದ ಅನುದಾನದ ವಿವರವನ್ನು ಸಭೆಗೆ ತಿಳಿಸಿದರು.

ಮಾನ್ಯ ಸದಸ್ಯರಾದ ಶ್ರೀಮತಿ ದಾಕ್ಷಾಯಣಿ ರವರು ಮಾತನಾಡಿ, ಕಾಶಾಪುರದ ಅಕ್ಕಿ-ಪಿಕ್ಕರ ಕಾಲೋನಿಯಲ್ಲಿರುವ ಆಶ್ರಮಶಾಲೆಯಲ್ಲಿ ಶಿಕ್ಷಕರು ಇಲ್ಲದೆ ವಿದ್ಯಾರ್ಥಿಗಳಿಗೆ ತೊಂದರೆಯಾಗಿರುತ್ತದೆ; ಕೂಡಲೇ ಶಿಕ್ಷಕರ ವ್ಯವಸ್ಥೆ ಮಾಡಲು ತಿಳಿಸಿದರು. ಶಾದಿಭಾಗ್ಯ

ಕಾರ್ಯಕ್ರಮದಲ್ಲಿ ಮೊದಲ ಕಂತಿನಲ್ಲಿ 20 ಫಲಾನುಭವಿಗಳಿಗೆ ಹಣ ನೀಡಿದ್ದು ಉಳಿಕೆ 16 ಫಲಾನುಭವಿಗಳಿಗೆ ಕೊಡಲು ಕ್ರಮವಹಿಸಲಾಗುತ್ತಿದೆ ಎಂದು ತಿಳಿಸಿದರು.

**( ಕ್ರಮ: ಜಿಲ್ಲಾ ಅಧಿಕಾರಿಗಳು, ಬಿ.ಸಿ.ಎಂ. ಇಲಾಖೆ, ತುಮಕೂರು)**

**15) ಸಮಾಜ ಕಲ್ಯಾಣ ಇಲಾಖೆ:-** ಇಲಾಖಾಧಿಕಾರಿಗಳು ಇಲಾಖೆಯ ಕಾರ್ಯಕ್ರಮಗಳ ಬಗ್ಗೆ ಮತ್ತು ಸರ್ಕಾರದಿಂದ 2013-14ನೇ ಸಾಲಿನಲ್ಲಿ ಬಿಡುಗಡೆ, ಖರ್ಚು, ಉಳಿಕೆಯಾದ ಅನುದಾನದ ವಿವರವನ್ನು ಸಭೆಗೆ ತಿಳಿಸಿದರು.

**16) ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ:-** ಉಪ ನಿರ್ದೇಶಕರು ಇಲಾಖೆಯ ಕಾರ್ಯಕ್ರಮಗಳ ಬಗ್ಗೆ ಮತ್ತು ಸರ್ಕಾರದಿಂದ 2013-14ನೇ ಸಾಲಿನಲ್ಲಿ ಬಿಡುಗಡೆ, ಖರ್ಚು, ಉಳಿಕೆಯಾದ ಅನುದಾನದ ವಿವರವನ್ನು ಹಾಗೂ ಯಾವುದೇ ಅನುದಾನ ವ್ಯಪಗತವಾಗಿರುವುದಿಲ್ಲವೆಂದು ಸಭೆಗೆ ತಿಳಿಸಿದರು.

**17) ಪಶುಪಾಲನೆ ಮತ್ತು ಪಶುವೈದ್ಯಕೀಯ ಇಲಾಖೆ:** ಇಲಾಖೆಯ ಕಾರ್ಯಕ್ರಮಗಳ ಬಗ್ಗೆ ಮತ್ತು ಸರ್ಕಾರದಿಂದ 2013-14ನೇ ಸಾಲಿನಲ್ಲಿ ಬಿಡುಗಡೆ, ಖರ್ಚು, ಉಳಿಕೆಯಾದ ಅನುದಾನದ ವಿವರವನ್ನು ಸಭೆಗೆ ತಿಳಿಸಿದರು.

ಮಾನ್ಯ ಸದಸ್ಯರಾದ ಶ್ರೀ ಟಿ.ಹೆಚ್. ಕೃಷ್ಣಪ್ಪನವರು ಮಾತನಾಡಿ, ಗಿರಿರಾಜ ಕೋಳಿ ಸಾಕಾಣಿಕೆ ಬಗ್ಗೆ ವಿವರ ಪಡೆದು, ತುಮಕೂರು ಮತ್ತು ಶಿರಾದಲ್ಲಿ ಒಂದೊಂದು ಸಂಸ್ಥೆಗಳಿವೆ: ಗಿರಿರಾಜ ಕೋಳಿ ಮರಿಗಳನ್ನು ಮೂರು ಬ್ಯಾಚ್ ಗಳಲ್ಲಿ 4 ವಾರ ಪೋಷಿಸಿದ 15 ಮರಿಗಳನ್ನು ವಿತರಿಸಲಾಗುವುದು; Feeder-Water-Meshಗಳನ್ನು ಸಹ ವಿತರಿಸಲಾಗುವುದು ಎಂದು ಇಲಾಖಾಧಿಕಾರಿಗಳು ತಿಳಿಸಿದರು.

**( ಕ್ರಮ: ಹಿರಿಯ ಸಹಾಯಕ ನಿರ್ದೇಶಕರು, ಪಶುಪಾಲನೆ ಮತ್ತು ಪಶುವೈದ್ಯಕೀಯ ಇಲಾಖೆ: ತುಮಕೂರು)**

ಮಾನ್ಯ ಸದಸ್ಯರಾದ ಶ್ರೀ ಟಿ.ಹೆಚ್. ಕೃಷ್ಣಪ್ಪನವರು ಮಾತನಾಡಿ,ಎಲ್ಲಿ ಕುಡಿಯುವ ನೀರಿನ ಸಮಸ್ಯೆ ಇದೆಯೋ ಅಲ್ಲಿಗೆ ಟ್ಯಾಂಕರ್ ಮೂಲಕ ನೀರು ಸರಬರಾಜು ಮಾಡಲು ಅಧಿಕಾರಿಗಳು ಕ್ರಮವಹಿಸುವಂತೆ ತಿಳಿಸಿದರು. ಮುಂದುವರೆದು ಮಾನ್ಯ ಸದಸ್ಯರು ಸುವರ್ಣ ಗ್ರಾಮೋದಯ ಯೋಜನೆಯಡಿ ಬಿಡುಗಡೆಯಾದ ಅನುದಾನದ ಖರ್ಚು-ವೆಚ್ಚ-ಉಳಿಕೆ- Laps ಮಾಹಿತಿಯನ್ನು ನೀಡಲು ತಿಳಿಸಿದರು.

ಸದಸ್ಯ ಕಾರ್ಯದರ್ಶಿಗಳು ಮಾತನಾಡಿ, Charted Accountant ರವರು ಕೇಂದ್ರ ಸರ್ಕಾರದ ಯೋಜನೆಗಳ ಆಡಿಟ್ ಗಾಗಿ ಎಲ್ಲಾ ಗ್ರಾ.ಪಂ.ಗಳಿಗೆ ಬರುತ್ತಿದ್ದು ಎಲ್ಲಾ ಕಾರ್ಯನಿರ್ವಾಹಕ

ಅಧಿಕಾರಿಗಳು/ಪಿ.ಡಿ.ಓ.ರವರು ಅವರಿಗೆ ಯೋಜನೆಗಳ ಪೂರ್ಣ ಮಾಹಿತಿಯನ್ನು ನೀಡುವಂತೆ ಸೂಚಿಸಲಾಯಿತು.

ಕೊನೆಯದಾಗಿ ಮಾನ್ಯ ಅಧ್ಯಕ್ಷರು ಮಾತನಾಡಿ, ಯೋಜನಾ ಶಾಖೆಗೆ ಮತ್ತು ಲೆಕ್ಕ ಶಾಖೆಗೆ ಒದಗಿಸಿರುವ ಅನುದಾನದ ವಿವರ, ಖರ್ಚು, ವ್ಯಪಗತ ವಿವರಗಳು ಒಂದಕ್ಕೊಂದು ತಾಳೆಯಾಗದಿರುವುದು ಕಂಡುಬಂದಿರುತದೆ. ಆದುದರಿಂದ ದಿನಾಂಕ:19-05-2014ರಂದು ಇಲಾಖಾಧಿಕಾರಿಗಳು Chief Account Officer & Chief Planning Officer ರವರನ್ನು ಭೇಟಿ ಮಾಡಿ ಮತ್ತೊಮ್ಮೆ ಲೆಕ್ಕಗಳನ್ನು ಪರಾಮರ್ಶಿಸಲು ತಿಳಿಸಿದರು.

ಚರ್ಚಿಸತಕ್ಕ ವಿಷಯಗಳು ಮುಕ್ತಾಯವಾದ್ದರಿಂದ ಮುಖ್ಯ ಲೆಕ್ಕಾಧಿಕಾರಿಗಳ ವಂದನಾರ್ಪಣೆಯೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ಸಹಿ:-
ಮುಖ್ಯ ಲೆಕ್ಕಾಧಿಕಾರಿಗಳು ಹಾಗೂ
*ಸದಸ್ಯ ಕಾರ್ಯದರ್ಶಿಗಳು,*
ಹಣಕಾಸು, ಲೆಕ್ಕಪರಿಶೋಧನೆ ಮತ್ತು
ಯೋಜನಾ ಸ್ಥಾಯಿ ಸಮಿತಿ,
ಜಿಲ್ಲಾ ಪಂಚಾಯತ್, ತುಮಕೂರು.

ಸಹಿ:-
*ಅಧ್ಯಕ್ಷರು,*
ಜಿಲ್ಲಾ ಪಂಚಾಯತ್ ಹಾಗೂ
ಹಣಕಾಸು ಲೆಕ್ಕ ಪರಿಶೋಧನೆ ಮತ್ತು
ಯೋಜನಾ ಸ್ಥಾಯಿ ಸಮಿತಿ,
ಜಿಲ್ಲಾ ಪಂಚಾಯತ್, ತುಮಕೂರು.

ಸಂಖ್ಯೆ:ತುಜಿಪ/ಮುಲೆಅ/ಹಲೆಪಯೋಸ್ಥಾಸಭೆ-1/ಸಭಾ ನಡವಳಿ/14-15 ದಿನಾಂಕ:21-05-2014.

ಪ್ರತಿಯನ್ನು:

1. ಅಧ್ಯಕ್ಷರು/ಉಪಾಧ್ಯಕ್ಷರು, ಜಿಲ್ಲಾ ಪಂಚಾಯತ್, ತುಮಕೂರು ರವರ ಆಪ್ತ ಶಾಖೆಗೆ
2. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿ.ಪಂ.ತುಮಕೂರು ರವರ ಆಪ್ತಶಾಖೆಗೆ
3. ಮಾನ್ಯ ಜಿಲ್ಲಾ ಪಂಚಾಯತ್ ಸದಸ್ಯರು ಹಾಗೂ ಹಣಕಾಸು ಲೆಕ್ಕ ಪರಿಶೋಧನಾ ಮತ್ತು ಯೋಜನಾ ಸ್ಥಾಯಿ ಸಮಿತಿ ಸದಸ್ಯರು, ಜಿ.ಪಂ.ತುಮಕೂರು ರವರಿಗೆ
4. ಪ್ರತಿಯನ್ನು ಜಿಲ್ಲಾ ಪಂಚಾಯತ್ ವ್ಯಾಪ್ತಿಯ ಇಲಾಖಾ ಮುಖ್ಯಸ್ಥರುಗಳಿಗೆ ರವಾನಿಸುತ್ತಾ, ದಯವಿಟ್ಟು ಸಂಬಂಧಿಸಿದ ಅಂಶಗಳಿಗೆ ಕೂಡಲೇ ಅನುಪಾಲನಾ ವರದಿಯನ್ನು ಮುದ್ದಾಂ ಲೆಕ್ಕ ಶಾಖೆಗೆ ಸಲ್ಲಿಸಲು ಕೋರಿದೆ. ಹಾಗೂ ಅನುಪಾಲನಾ ವರದಿಯನ್ನು Xerox A4 Size ಹಾಳೆಯಲ್ಲಿ ಗಣಕೀಕರಣ ಮಾಡಿ 40(ನಲವತ್ತು)ಪ್ರತಿಗಳನ್ನು ಸಲ್ಲಿಸತಕ್ಕದ್ದು.
5. ಎಲ್ಲಾ ಕಾರ್ಯನಿರ್ವಾಹಕ ಅಧಿಕಾರಿಗಳು, ತಾಲ್ಲೂಕು ಪಂಚಾಯತ್, . . . . . . . . . . .
6. ಜಿಲ್ಲಾ ಪಂಚಾಯತ್ ಶಾಖಾ ಮುಖ್ಯಸ್ಥರಿಗೆ, ಅಕ್ಷರ ದಾಸೋಹ, ಸಂಕಲನ ಶಾಖೆ. ಕಳುಹಿಸಲಾಗಿದೆ.
7. ಪ್ರಾಚಾರ್ಯರು, ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆ, ಅಮ್ಮಸಂದ್ರ, ತುರುವೇಕೆರೆ ತಾಲ್ಲೂಕು
8. ಕಛೇರಿ ಪ್ರತಿ

21/5/14

ಮುಖ್ಯ ಲೆಕ್ಕಾಧಿಕಾರಿಗಳು ಹಾಗೂ
ಸದಸ್ಯ ಕಾರ್ಯದರ್ಶಿಗಳು,
ಹಣಕಾಸು, ಲೆಕ್ಕಪರಿಶೋಧನೆ ಮತ್ತು
ಯೋಜನಾ ಸ್ಥಾಯಿ ಸಮಿತಿ,
ಜಿಲ್ಲಾ ಪಂಚಾಯತ್, ತುಮಕೂರು.